**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

**ಸಂಖ್ಯೆ: ಪಪೂಶಿ/ಲೆಪ-03/ಮಾಹಿತಿ/2017-18** **ದಿನಾಂಕ: 30-06-2017.**

## ಸುತ್ತೋಲೆ

ವಿಷಯ:- 2016-17ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಜೂನ್-2016 ರಿಂದ ಫೆಬ್ರವರಿ-2017ವರೆಗೆ ವಯೋನಿವೃತ್ತಿಯಾದ ಉಪನ್ಯಾಸಕರುಗಳು ಶೈಕ್ಷಣಿಕ ವರ್ಷಾಂತ್ಯದವರೆಗೆ ಸೇವೆಯನ್ನು ಮುಂದುವರಿಸಿರುವ ಉಪನ್ಯಾಸಕರುಗಳಿಗೆ ಗೌರವ ಸಂಭಾವನೆಯನ್ನು ಪಾವತಿಸಲು ಅಗತ್ಯವಿರುವ ಅನುದಾನದ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಎಸ್.ಟಿ.ಬಿ. 2016, ದಿನಾಂಕ: 25-06-2016.

***********

1. ಉಲ್ಲೇಖಿತ ಸರ್ಕಾರದ ಆದೇಶದನ್ವಯ 2016-17ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಜೂನ್-2016 ರಿಂದ ಫೆಬ್ರವರಿ-2017ವರೆಗೆ ವಯೋನಿವೃತ್ತಿಯಾದ ಉಪನ್ಯಾಸಕರುಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಠ ಪ್ರವಚನಗಳು ಸುಸೂತ್ರವಾಗಿ ನಡೆಯಲು ಶೈಕ್ಷಣಿಕ ವರ್ಷಾಂತ್ಯದವರೆಗೆ (ದಿನಾಂಕ: 31-03-2017 ವರೆಗೆ) ಸೇವೆಯನ್ನು ಮುಂದುವರಿಸಲು ಅನುಮತಿ ನೀಡಿ ಸದರಿ ಉಪನ್ಯಾಸಕರಿಗೆ ಗೌರವ ಸಂಭಾವನೆಯನ್ನು ಲೆಕ್ಕಶೀರ್ಷಿಕೆ: 2202-02-109-0-13-059 ರಡಿ ವೆಚ್ಚಭರಿಸಲು ಆದೇಶಿಸಲಾಗಿದೆ.

2. ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 31-03-2017ರವರಗೆ ಸೇವೆಯನ್ನು ಮುಂದುವರೆಸಿದ ಉಪನ್ಯಾಸಕರುಗಳಿಗೆ ಗೌರವ ಸಂಭಾವನೆಯನ್ನು ಪಾವತಿಸಲು ಅನುದಾನದ ಅವಶ್ಯಕತೆಯಿದ್ದಲ್ಲಿ, ಉಪನ್ಯಾಸಕರಿಗೆ ಸಲ್ಲಬೇಕಾದ ಗೌರವ ಸಂಭಾವನೆಯನ್ನು ನಿಯಮಾನುಸಾರ ಲೆಕ್ಕಾಚಾರ ಮಾಡಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಕೋರಿಕೆಗಳನ್ನು ಪಡೆದು ಕ್ರೋಢೀಕರಿಸಿ ಜಿಲ್ಲೆಗೆ ಅಗತ್ಯವಿರುವ ಒಟ್ಟಾರೆ ಮೊತ್ತವನ್ನು ಒಂದೇ ಬಾರಿಗೆ ಕೋರಲು ಸೂಚಿಸಿದೆ. ಅನುದಾನ ಕೋರಿಕೆ ಪತ್ರಗಳನ್ನು **ದಿನಾಂಕ: 10-07-2017 ರೊಳಗೆ** ತಪ್ಪದೆ ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಕೊಠಡಿ ಸಂಖ್ಯೆ-301, 3ನೇ ಮಹಡಿ, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲೇಶ್ವರಂ, ಬೆಂಗಳೂರು-560012. ರವರಿಗೆ ಸಲ್ಲಿಸಲು ಕೋರಿದೆ.

3. ಜಿಲ್ಲಾ ಉಪನಿರ್ದೇಶಕರುಗಳಿಂದ ಸ್ವೀಕೃತವಾದ ಕೋರಿಕೆ ಮೊತ್ತಗಳನ್ನು ಆಧರಿಸಿ 2017-18ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ: 2202-02-109-0-13-059 ರಡಿ ಸರ್ಕಾರದಿಂದ ಹೆಚ್ಚುವರಿ ಅನುದಾನಕ್ಕೆ ಕೋರಿಕೆ ಸಲ್ಲಿಸಬೇಕಾಗಿರುವುದರಿಂದ ತಮ್ಮ ವ್ಯಾಪ್ತಿಯಲ್ಲಿ ಮುಂದಿನ ಅನುದಾನದ ವ್ಯತ್ಯಯ ಉಂಟಾದಲ್ಲಿ ಜಿಲ್ಲಾ ಉಪನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ ಎಂಬ ಅಂಶವನ್ನು ಗಮನಿಸತಕ್ಕದ್ದು.

30/6/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂಪದ
ನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ.

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಮುಂದಿನ ಕ್ರಮಕ್ಕಾಗಿ,
2. ನಿರ್ದೇಶಕರ ಆಪ್ತ ಶಾಖೆಗೆ, ಮಾಹಿತಿಗಾಗಿ.
3. ಕಛೇರಿ ಪ್ರತಿ.